**ದಿಃ04.09.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ 15 ನೇ ಪ್ರತಿವಾದಿ ಪರ ವಕೀಲರಿಂದಃ**

1. ನನ್ನ ಗಂಡನ ಮೊದಲನೇ ಹೆಂಡತಿಯ ಹೆಸರು ಕಾವೇರಮ್ಮ ಆಗಿರುತ್ತದೆ. ನನ್ನನ್ನು ಬಸಮ್ಮ ಎಂದು ಕೂಡ ಕರೆಯುತ್ತಾರೆ. ನನ್ನ ಗಂಡನ ಮೊದಲನೇ ಹೆಂಡತಿಯಾದ ಕಾವೇರಮ್ಮ ರವರು ಮೃತ ಪಟ್ಟ ಮೂರು ವರ್ಷಗಳ ನಂತರದಲ್ಲಿ ನನ್ನ ಮದುವೆಯಾಗಿರುತ್ತದೆ. ನನ್ನ ಗಂಡನ ಮೊದಲನೇ ಹೆಂಡತಿಗೆ ಮಕ್ಕಳು ಇದ್ದರೊ ಇಲ್ಲವೊ ಎಂಬುದರ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಗಂಡ ತನ್ನ ಜೀವಿತ ಕಾಲದಲ್ಲಿ ಸೋಮವಾರಪೇಟೆಯ ಒಳಗುಂದ ಗ್ರಾಮದಲ್ಲಿ ವಾಸಿಸುತ್ತಿದ್ದರು. ನನ್ನ ಗಂಡ ಅವರ ಮೊದಲನೆ ಪತ್ನಿ ಇರುವಾಗಲೂ ಕೂಡ ಸದರಿ ಗ್ರಾಮದಲ್ಲಿಯೇ ವಾಸಿಸುತ್ತಿದ್ದರು ಎಂದರೆ ಸರಿ.

2. ನನ್ನ ಮಾವನ ಹೆಸರು ಬೆಳ್ಳಿಯಪ್ಪ. ನನ್ನ ಮಾವನಿಗೆ ನನ್ನ ಗಂಡ ಒಬ್ಬರೆ ಮಗನಾಗಿರುತ್ತಾರೆ. ನನ್ನ ಮಾವನಾದ ಬೆಳ್ಳಿಯಪ್ಪರವರ ಮೊದಲನೆ ಹೆಂಡತಿಯ ಹೆಸರು ಬೊಳ್ಳಮ್ಮ ಆಗಿರುತ್ತದೆ ಮತ್ತು ಎರಡನೇ ಹೆಂಡತಿಯ ಹೆಸರು ನೀಲಮ್ಮ ಆಗಿರುತ್ತದೆ. ಬೋಳಮ್ಮ ರವರಿಗೆ ಮಕ್ಕಳು ಇರುವುದಿಲ್ಲ. ನೀಲಮ್ಮ ರವರಿಗೆ ನನ್ನ ಗಂಡ ಒಬ್ಬರೆ ಮಗನಾಗಿರುತ್ತಾರೆ. ಹೆಣ್ಣುಮಕ್ಕಳು ಇದ್ದಾರೊ ಇಲ್ಲವೊ ಎನ್ನುವುದು ಈವರೆಗೂ ನನಗೆ ಗೊತ್ತಿಲ್ಲ.

3. ಒಳಗುಂದ ಗ್ರಾಮದಲ್ಲಿ ನಮಗೆ ಸಂಬಧಿಸಿದ ಯಾವುದೇ ಆಸ್ತಿ ಇರುವುದಿಲ್ಲ. ಮರಂದೋಡ ಗ್ರಾಮದಲ್ಲಿ ನಾನು ವಾಸಿಸುತ್ತಿರುವುದಿಲ್ಲ. ಸಾಕ್ಷಿ ಮುಂದುವರೆದು ನನ್ನ ದೊಡ್ಡಅತ್ತೆಯಾದ ಬೊಳ್ಳಮ್ಮ ರವರು ವಾಸಿಸುತ್ತಿದ್ದರು. ಬೊಳ್ಳಮ್ಮರವರು ದಿಃ20/09/1975 ರಂದು ಮೃತಪಟ್ಟಿರುತ್ತಾರೆ. ಬೊಳ್ಳಮ್ಮರವರು ಮೃತ ಪಟ್ಟ ನಂತರದಲ್ಲಿ ಮರಂದೋಡದಲ್ಲಿ ಇರುವ ಮನೆಯಲ್ಲಿ ಚಂಗಪ್ಪರವರ

ಮಕ್ಕಳು, ಸೋಮಪ್ಪರವರ ಮಕ್ಕಳು, ಕಾರ್ಯಪ್ಪರವರ ಮಕ್ಕಳು, ಅಪ್ಪಚ್ಚುರವರ ಮಕ್ಕಳು ವಾಸಿಸುತ್ತಿದ್ದಾರೆ.

4. ವಾದ ಪತ್ರದ ಶಿರೋನಾಮೆಯಲ್ಲಿ ಪ್ರತಿವಾದಿಗಳ ಹೆಸರಿನ ಮೊದಲಿಗೆ 'ಎ' ಎಂಬ ಅಕ್ಷರ ಇದೆ ಎಂದರೆ ಸರಿ. 'ಎ' ಎಂದರೆ ಬೊಳ್ಳಮ್ಮ ಎಂದು. ಅಯ್ಯಟ್ಟಿರಾ ಕುಟುಂಬದ ಮೂಲ ಪುರಷ ತಿಮ್ಮಯ್ಯ ಆಗಿಗುತ್ತಾರೆ. ಸದರಿ ತಿಮಯ್ಯ ಎಂಬುವವರಿಗೆ ಚಂಗಪ್ಪ ಮತ್ತು ಬೆಳ್ಳಿಯಪ್ಪ ಇಬ್ಬರು ಮಕ್ಕಳು. ಸದರಿ ಚಂಗಪ್ಪವರಿಗೆ ಇಬ್ಬರೂ ಮಕ್ಕಳು. ಸದರಿಯವರ ಹೆಸರು ಕಾರ್ಯಪ್ಪ ಮತ್ತು ತಿಮ್ಮಯ್ಯ ಆಗಿರುತ್ತದೆ. ನಮ್ಮ ಆಯ್ಯಟ್ಟಿರ ಕುಟುಂಬದ ಮೂಲ ಪುರುಷನಿಂದ ನಂತರದ ವಾರಸುದಾರರ ಬಗ್ಗೆ ತೋರಿಸಲು ನ್ಯಾಯಾಲಯಕ್ಕೆ ವಂಶವೃಕ್ಷವನ್ನು ಹಾಜರುಪಡಿಸಿರುವುದಿಲ್ಲ.

5. ನನ್ನ ಗಂಡನ ಮೊದಲನೆ ಹೆಂಡತಿಯನ್ನು ಪಾರ್ವತಿಯೆಂದು ಕರೆಯುದರ ಬಗ್ಗೆ ನನಗೆ ಗೊತ್ತಿಲ್ಲ. ದಿ:26/6/1998 ರ ಕ್ರಯ ಪತ್ರದಲ್ಲಿ ಕಂಡು ಬರುವ ಮಾರಾಟಗಾರರ ಸಂಖ್ಯೆ 3 ರಲ್ಲಿ ತಿಳಿಸಿರುವ ವಿಳಾಸ ಮತ್ತು ಹೆಸರು ನನ್ನದಾಗಿರುತ್ತದೆ. ಸದರಿ ಕ್ರಯ ಪತ್ರವನ್ನು ನಾನು, ನನ್ನ ಗಂಡ ಮತ್ತು ನನ್ನ ಮಕ್ಕಳು ಶಾಂತಿ ಡಿಸೆಲ್ವಾ ಎಂಬುವವರಿಗೆ ಮಾಡಿಕೊಟ್ಟಿರುತ್ತೇವೆ ಎಂದರೆ ಸರಿ . ನನಗೆ ಕನ್ನಡ ಓದಲು ಬರೆಯಲು ಗೊತ್ತಿದೆ. ಸದರಿ ಕ್ರಯಪತ್ರ ಆಗುವ ಸಮಯದಲ್ಲಿ ನಾನು ಕ್ರಯ ಪತ್ರದಲ್ಲಿ ತಿಳಿಸಿರುವ ಎಲ್ಲಾ ಅಂಶವನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ ಎಂದರೆ ಸರಿ. ಸದರಿ ಕ್ರಯ ಪತ್ರದಲ್ಲಿ ನನ್ನ ಗಂಡನ ಮೊದಲನೆ ಹೆಂಡತಿಯಾದ ಪಾರ್ವತಿಯವರ ಮಗನಾದ ಎ. ಸುನೀಲ ಕುಮಾರರವರು ಕೂಡಾ ಮಾರಾಟಗಾರರಾಗಿ ಸಹಿ ಮಾಡಿರುತ್ತಾರೆ ಎಂದರೆ ಇರಬಹುದು ಎಂದು ನುಡಿಯುತ್ತಾರೆ. ಅದೇ ರೀತಿ ನನ್ನ ಮಾವನಾದ

ಬೆಳ್ಳಿಯಪ್ಪರವರ ಎರಡನೇ ಹೆಂಡತಿಯಾದ ನೀಲಮ್ಮರವರ ಹೆಣ್ಣು ಮಕ್ಕಳಾದ ಹೆಚ್ ಪಾರ್ವತಿ ಮತ್ತು ಜಿ ಪದ್ಮಿನಿ ಕೂಡಾ ಮಾರಾಟಗಾರರಾಗಿ ಸಹಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ಕ್ರಯ ಪತ್ರದ ಪ್ರಕಾರ ನನ್ನ ಮಾವನಾದ ಬೆಳ್ಳಿಯಪ್ಪರವರ ಹಿಸ್ಸೆಗೆ ಬಂದಂತಹ ಆಸ್ತಿಯನ್ನು ನಾವು ಎಲ್ಲರೂ ಸೇರಿ ಶಾಂತಿ ಡಿಸೆಲ್ವಾ ಎಂಬುವರಿಗೆ ಮಾಟಾರ ಮಾಡಿರುತ್ತೇವೆ ಎಂದರೆ ಸರಿ. ಸದರಿ ಕ್ರಯ ಪತ್ರದಲ್ಲಿ ತಿಳಿಸಿರುವತಹ ಆಸ್ತಿ ಬೆಳ್ಳಿಯಪ್ಪರವರ ಸ್ವಯಾರ್ಜಿತ ಆಸ್ತಿಯಾಗಿರುತ್ತದೆ. ಸದರಿ ಕ್ರಯ ಪತ್ರದಲ್ಲಿ ತಿಳಿಸಿರುವಂತಹ ಆಸ್ತಿ ಬೆಳ್ಳಿಯಪ್ಪರವರ ಸ್ವಯಾರ್ಜಿತ ಆಸ್ತಿ ಎಂದು ತೋರಿಸಲು ಮಂಜೂರಾತಿ ಪತ್ರ ಕ್ರಯ ಪತ್ರ ಅಥವಾ ಬೇರೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

6. ದಿ:26/6/1998 ರಂದು ನಾನು ನನ್ನ ಗಂಡ , ಮಕ್ಕಳು ಮತ್ತು ನೀಲಮ್ಮ ರವರ ಹೆಣ್ಣು ಮಕ್ಕಳು ಹಾಗೂ ನನ್ನ ಗಂಡನ ಮೊದಲನೆ ಹೆಂಡತಿಯ ಮಗನಾದ ಸುನೀಲ ಕುಮಾರ ಎಲ್ಲರೂ ಸೇರಿಕೊಂಡು ಸರ್ವೆ ನಂ. 1/16 ರಲ್ಲಿರುವ 1 ಎಕರೆ ಆಸ್ತಿಗೆ ಸಂಬಂಧಿಸಿದಂತೆ ನವೀನ ಮ್ಯಾಕ್ಲಿಂ ಡಿಸೆಲ್ವಾ ಎಂಬುವವರಿಗೆ ಮಾರಾಟ ಮಾಡಿರುತ್ತೇವೆ ಎಂದರೆ ಸುಳ್ಳು. ಸದರಿ ಕ್ರಯ ಪತ್ರದ ಪ್ರಕಾರ ನಾವೆಲ್ಲರೂ ಸೇರಿಕೊಂಡು ಸರ್ವೆ ನಂ. 1/44 ರಲ್ಲಿರುವ 2 ಎಕರೆ ಆಸ್ತಿಯನ್ನು ಕೂಡಾ ಮಾರಾಟ ಮಾಡಿರುತ್ತೇವೆ ಎಂದರೆ ಸುಳ್ಳು. ಸದರಿ 2 ಕ್ರಯ ಪತ್ರಗಳ ಪ್ರಕಾರ ನನ್ನ ಮಾವನಾದ ಬೆಳ್ಳಿಯಪ್ಪರವರ ಹಿಸ್ಸೆಗೆ ಬಂದಂತಹ ಆಸ್ತಿಗಳನ್ನು ಮಾರಾಟ ಮಾಡಿರುತ್ತೇವೆ ಎಂದರೆ ಸುಳ್ಳು.

7. ನನ್ನ ಗಂಡನ ತಂಗಿಯರಾದಂತಹ ಪಾವರ್ತಿ ಮತ್ತು ಪದ್ಮನಿಯವರನ್ನು ಹಾಗೂ ನನ್ನ ಗಂಡನ ಮೊದಲನೆ ಹೆಂಡತಿಯ ಮಗನಾದ ಸುನೀಲ ಕುಮಾರ ರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಲು ಏನಾದರೂ ತೊಂದರೆ

ಇದೆಯೋ ಎನ್ನುವ ಪಶ್ನೆಗೆ ಸಾಕ್ಷಿ ಸದರಿಯವರು ಎಲ್ಲಿ ಇದ್ದಾರೆ ಎಂದು ಹುಡಕಲು ನನಗೆ ಆಗುವುದಿಲ್ಲ ಎಂದು ನುಡಿತ್ತಾರೆ. ನನಗೆ ಸದರಿ ಮಾರು ಜನರ ವಿಳಾಸ ಗೊತ್ತಿದ್ದರು ಕೂಡಾ ಗೊತ್ತಿರುವುದಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದೆನೆಂದರೆ ಸರಿಯಲ್ಲ.

8. ಮೂರನೇ ವಾದಿ ದಿ:04/04/2024 ರಂದು ಮೃತ ಪಟ್ಟಿರುತ್ತಾರೆ. ನನ್ನ ಮಗನಾದ ಮೂರನೆ ವಾದಿಗೆ ಹೆಂಡತಿ ಮತ್ತು ಒಬ್ಬಳು ಮಗಳು ಇರುತ್ತಾರೆ. ನನ್ನ ಮೊಮ್ಮಗಳ ಹೆಸರು ಸ್ನೇಹಾ ಆಗಿರುತ್ತದೆ. ಸದರಿಯವರು ನನ್ನ ಜೊತೆ ವಾಸಿಸುತ್ತಿದ್ದಾರೆ ಎಂದರೆ ಸರಿ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದಾರೆ. ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-

(ಎನ್. ಬಿ. ಜಯಲಕ್ಷ್ಮಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.